# ಪೀಠಿಕೆ

ನಾವು ಒಟ್ಟಾಗಿ ಅಧ್ಯಯನ ಮಾಡುವಾಗ, ನಜರೇತಿನ ಯೇಸುವು ದೇವರ ಕುಮಾರನೂ ಕುಮಾರನಾದ ದೇವರೂ ಎರಡೂ ಆಗಿರುವನೆಂದು ನಾವು ನೋಡುತ್ತೇವೆ. ಇದು ನಿರಾಕರಿಸಿದ ತೀರ್ಮಾನದಂತೆ ತೋರಬಹುದು. ಆದರೆ ಭೂಮಿಯ ಮೇಲಿನ ಬಿಲಿಯನ್‌ಗಟ್ಟಲೆ ಜನರಲ್ಲಿ ಅನೇಕರು ಯೇಸುವನ್ನು ದೇವರಾಗಿದ್ದಾನೆ ಎಂಬ ಕ್ರೈಸ್ತ ನಂಬಿಕೆಯನ್ನು ಸ್ವೀಕರಿಸದೇ ಇರುವಂಥದ್ದು ಆಶ್ಚರ್ಯಕರವಾದದ್ದಾಗಿದೆ. ಈ ಕೆಳಗಿನ ಧಾರ್ಮಿಕ ಸಂಖ್ಯಾ ಸಂಗ್ರಹವನ್ನು ನೋಡಿರಿ:[1]

| | | |
|---|---|---|
| ಕ್ರಿಸ್ತನಲ್ಲಿ ನಂಬಿಕೆ ಇರುವ ಧರ್ಮಗಳು | 32.92% | 2.07 ಬಿಲಿಯನ್ |
| ಕ್ರಿಸ್ತನಲ್ಲಿ ನಂಬಿಕೆ ಇಡದ ಧರ್ಮಗಳು | 52. 25% | 3.28 ಬಿಲಿಯನ್ |
| ನಾಸ್ತಿಕರು ಹಾಗೂ ಧರ್ಮವಿಲ್ಲದವರು | 14.84% | 0. 93 ಬಿಲಿಯನ್ |
| ಒಟ್ಟು ಜನಸಂಖ್ಯೆ | | 6. 28 ಬಿಲಿಯನ್ |

ಈ ಸಂಖ್ಯಾ ಸಂಗ್ರಹವು ಯೇಸುವಿನ ದೈವತ್ವವನ್ನು ಸ್ಪಷ್ಟೀಕರಿಸುತ್ತದೆ. ಅವು ಕೆಲವು ಸಮಂಜಸವಾದ ಪ್ರಶ್ನೆಗಳನ್ನು ಹುಟ್ಟಿಸುತ್ತದೆ: ಬಿಲಿಯನ್‌ಗಟ್ಟಲೆ ಜನರು ಯೇಸುವಿನ ವಿಷಯವನ್ನು ಯಾಕೆ ತಿಳಿದಿರುವದಿಲ್ಲ? ಆತನ ಬಗ್ಗೆ ಅವರು ಯಾಕೆ ಕೇಳಿರುವದಿಲ್ಲ? ಈ ಪ್ರತಿಯೊಂದು ಪ್ರಶ್ನೆಗಳಿಗೆ ಪ್ರಮುಖ ಉತ್ತರವು ಜಾಗತಿಕ ಮಟ್ಟದ ಸುವಾರ್ತಾ ಸೇವೆಯ ಹಾಗೂ ಮಿಶನರಿ ಕಾರ್ಯದ ಕೊರತೆಯು ಕಾರಣವಾಗಿದೆ.

ಮುಂದಿನ ಎರಡು ಪ್ರಶ್ನೆಗಳು ಕೊಡುವ ಸವಾಲುನೊಂದಿಗೆ ನಾವು ಈ ಅಧ್ಯಯನದಲ್ಲಿ ಹೋರಾಡುವೆವು. (1) ಯೇಸುವಿನ ಬಗ್ಗೆ ಕೇಳಿದವರಲ್ಲಿ ಅನೇಕರು ಯಾಕೆ ಆತನನ್ನು ನಂಬಲಿಲ್ಲ? (2) ಆತನನ್ನು ದೇವರ ಕುಮಾರನೆಂದು ಸ್ವೀಕರಿಸುವ ಅನೇಕರು ಆತನನ್ನು ಕುಮಾರನಾದ ದೇವರು ಎಂದು ಯಾಕೆ ಸ್ವೀಕರಿಸುವದಿಲ್ಲ?

ಈ ಪ್ರಶ್ನೆಗಳಿಗೆ ಉತ್ತರಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದು. ಕೆಲವು ಹುರುಳಿಲ್ಲದವುಗಳು ಆದರೆ ಇತರವುಗಳು ಅವುಗಳನ್ನು ದಾಟಿ ಗಲಿಬಿಲಿಯನ್ನು ತಂದದ್ದರ ನೋವನ್ನು ಪ್ರಕಟಿಸುವವು. ಯೇಸುವನ್ನು ಕುರಿತಾಗಿರುವ ಈ ಗಲಿಬಿಲಿಯು ತಪ್ಪಾದ ಇಲ್ಲವೇ ಅಕಾಲಿಕ ಬೋಧನೆಯ ವಿಧಾನದ ಕಾರಣವಾಗಿರಬಹುದು. ಹಲವಾರು ವರ್ಷಗಳ ಹಿಂದಿನ ಜಿಮ್ ಜೋನ್ಸ್[2] ನಂಥವರ ಮತಾಚರಣೆಯ ದುಃಖಾಂತ್ಯಗಳು ಅನೇಕ ಜನರಲ್ಲಿ ಸಹಜವಾಗಿ ಕ್ರಿಸ್ತನ ಬಗೆಗಿನ ಸತ್ಯಗಳ ಬಗ್ಗೆ ಅವಿಶ್ವಾಸವನ್ನು ಹುಟ್ಟಿಸಿದವು. ಅಂಥ ಘಟನೆಗಳು ಆಗದಿದ್ದರೆ ಯೇಸುವು ಯಾರಾಗಿದ್ದಾನೆ ಹಾಗೂ ಆತನ ಬೋಧನೆಗಳು ಏನನ್ನು ಒಳಗೊಂಡಿವೆ ಎಂಬುದರ ಸ್ಪಷ್ಟವಾದ, ತರ್ಕ ಬದ್ಧವಾದ ಬೋಧನೆಯನ್ನು ಜನರು ಸ್ವೀಕರಿಸುವವರಾಗಿರುತ್ತಿದ್ದರು.

ಯೇಸುವಿನಲ್ಲಿ ನಂಬಿಕೆಯಿಡದಿರಲು ಇಲ್ಲವೇ ಸ್ವೀಕರಿಸದಿರಲು ಇನ್ನೊಂದು ಕಾರಣವು ಆತನ ಅದ್ವಿತೀಯತೆಯನ್ನು ವಿವರಿಸುವದರಲ್ಲಿ ನಿಜವಾದ ತೊಂದರೆ ಆಗಿರಬಹುದು. ಯೇಸುವಿನಲ್ಲಿ ನಮಗೆ ನಂಬಿಕೆಯಿರಬಹುದು. ಆತನ ಬಗ್ಗೆ ಇತರರೂ ನಂಬುವಂತೆ ಮಾಡುವ ನಮ್ಮ ಪ್ರಯತ್ನಗಳು ಯಥಾರ್ಥವಾದವುಗಳಾಗಿರಬಹುದು. ಹಾಗಿದ್ದರೂ ಯೇಸುವಿನ ಬಗ್ಗೆ ಇರುವ ನಮ್ಮ ಗ್ರಹಿಕೆಯು ಮಸುಕಾದದ್ದೂ ಸಂಕುಚಿತ ವಾದದ್ದೂ ಆಗಿರಬಹುದು. ಆತನ ಬಗೆಗಿನ ಕಠಿಣವಾದ ಪ್ರಶ್ನೆಗಳ ಬಗ್ಗೆ ನಮಗೆ ತೊಂದರೆಗಳಿರಬಹುದು. ಯೇಸುವಿನಲ್ಲಿ ನಮ್ಮ ವಿಶ್ವಾಸವು, "ವಿಶೇಷವಾಗಿ ಅದು ಎರಡನೆಯವರಿಂದ ಬಂದದ್ದಾಗಿದ್ದರೆ," ನಾಸ್ತಿಕತೆಯ ಪರೀಕ್ಷಾರ್ಥವಾದ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ಆಳವಾಗಿರುವದಿಲ್ಲ. ನಮ್ಮ ವಿಶ್ವಾಸವನ್ನು ನಾವು ಅಲ್ಲಗಳೆಯ ಬೇಕು ಎಂದು ಹೇಳುವಂಥದ್ದಾಗಿರುವದಿಲ್ಲ. ಯೇಸುವಿನ ಬಗ್ಗೆ ಉತ್ತರಗಳಿಗಾಗಿ ಹುಡುಕುತ್ತಿರುವವರ ಜೀವನದಲ್ಲಿಯ ಬರಿದಾಗಿರುವಿಕೆಯನ್ನು ತುಂಬಲಿಕ್ಕೆ ನಾವು ಶಕ್ತರಾಗುವಂಥ ವಿಶ್ವಾಸದ ಪ್ರೌಢತೆಯಾಗಲೀ, ಮೂಲಗಳಾಗಲೀ ನಮ್ಮಲ್ಲಿ ಇರಲಿಕ್ಕಿಲ್ಲ ಎಂದು ಅರ್ಥವಾಗುತ್ತದೆ.

ಇದನ್ನು ನೀವು ಆಲೋಚಿಸಿರಿ: ನೀವು ಒಬ್ಬ ಸ್ನೇಹಿತನನ್ನು ಮುಂದಿನ ಭಾನುವಾರ ನಿಮ್ಮೊಂದಿಗೆ ಆರಾಧನೆಯಲ್ಲಿ ಭಾಗವಹಿಸಲು ಕೇಳಿಕೊಳ್ಳುವ ಧೈರ್ಯ ಹೊಂದಿದ್ದೀರಿ. ಒಂದು ವೇಳೆ ನಿಮ್ಮ ಸ್ನೇಹಿತನು, ಇತ್ತೀಚೆಗೆ, ದೇವರ ಕಡೆಗೆ ತಿರುಗಿ ಕೊಳ್ಳಬೇಕು, ಆತನನ್ನು ಆರಾಧಿಸಬೇಕು ಎಂದು ನಾನು ಯೋಚಿಸುತ್ತಿದ್ದೇನೆ. ಹಾಗಿದ್ದರೂ ಕ್ರೈಸ್ತರಾದ ನಿಮಗೆ ಮೂರು ದೇವರುಗಳಿರುವರು. ನನಗೆ ಯಾವುದೇ ರೀತಿಯ ಧರ್ಮವಿದ್ದರೆ, ಅದು ನಾನು ಏಕ ದೇವರನ್ನು ಆರಾಧಿಸುವಂಥದ್ದು ಆಗಿರುತ್ತದೆ. ನಾನು ಒಬ್ಬನೇ ದೇವರಲ್ಲಿ ನಂಬಿಕೆಯಿಟ್ಟಿದ್ದೇನೆ. ಮೂರು ದೇವರುಗಳಲ್ಲಿಯ ನಂಬಿಕೆಯನ್ನು ನಾನು ಸ್ವೀಕರಿಸಲಾರೆನು ಎಂದು ಹೇಳುವನೆಂದು ತಿಳಿಯಿರಿ. ನಿಮ್ಮ ಪ್ರತಿಕ್ರಿಯೆ ಏನು? ನೀವು ಹೇಗೆ ಉತ್ತರ ಕೊಡುವಿರಿ? ನೀವು ಹೇಳುವದನ್ನು ಹೇಗೆ ಸಮರ್ಥಿಸಿಕೊಳ್ಳುವಿರಿ?

ಇದು ನಿಮಗೆ ಸಮಸ್ಯೆಯನ್ನು ಹುಟ್ಟಿಸುತ್ತಿದ್ದರೆ ನೀವು ಒಬ್ಬರೇ ಇರುವದಿಲ್ಲ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ, ತಂದೆಯಾದ ದೇವರ ಮತ್ತು ಕುಮಾರನಾದ ದೇವರ ಬಗ್ಗೆ ಮಾತಾಡುವ ಏಕ ದೇವರ ತತ್ವಕ್ಕಾಗಿ ಕ್ರೈಸ್ತತ್ವವು ಹೇಗೆ ನಿಂತುಕೊಂಡಿತು ಎಂಬುದನ್ನು ಯೆಹೂದ್ಯರಿಗೂ, ಅನ್ಯ ಮೂರ್ತಿ ಪೂಜಕರಿಗೂ ವಿವರಿಸುವಲ್ಲಿ ಆದಿ ಸಭೆಯು ಹೋರಾಡಿತು.

ದೇವರ ಬಗೆಗಿನ ತತ್ವವು ನಮ್ಮ ಧರ್ಮವನ್ನು ಅಂತಿಮವಾಗಿ ತೀರ್ಮಾನಿಸುವದರಿಂದ ನಾವು ಯಥಾರ್ಥವಾಗಿ ಕುಮಾರನಾದ ದೇವರ ಬಗೆಗಿನ ನಮ್ಮ ಈಗಿನ ಪರೀಕ್ಷೆಯಲ್ಲಿ ನೀವು ಭಾಗವಹಿಸಬೇಕೆಂದು ಆಹ್ವಾನಿಸುತ್ತೇವೇ. ತಂದೆಯಾದ ದೇವರನ್ನು ಮತ್ತು ಕುಮಾರನಾದ ದೇವರನ್ನು ಒಳಗೊಂಡಿರುವ ಏಕ ದೇವರ ದೃಷ್ಟಿಕೋನವನ್ನು ಕ್ರೈಸ್ತತ್ವವು ಹೊಂದಿಕೊಂಡಿದೆ ಎಂಬುದನ್ನು ಆದಿ ಸಭೆಯು ಜನರಲ್ಲಿ ದೃಢಪಡಿಸಬೇಕೆಂದು ಅರಿತು ಕೊಂಡಿತು. ಅವರು ಹಾಗೆ ತಿಳಿದು ಕೊಂಡಿರದಿದ್ದರೆ, ಕ್ರೈಸ್ತತ್ವವು ತನ್ನ ಸತ್ಯವನ್ನು, ಬಲವನ್ನು, ಅದ್ವಿತೀಯತೆಯನ್ನು ಹಾಗೂ ಸಮಂಜಸತೆಯನ್ನು ಕಳೆದು ಕೊಳ್ಳುತ್ತದೆ.

---

ಟಿಪ್ಪಣಿಗಳು

[1]*The World Almanac and Book of Facts,* 1995 ed., s.v. "Religious Information." [2]ಜಿಮ್ ಜೋನ್ಸ್‌ನು ತನ್ನ ಮತಾಚರಣೆಯ ಹೆಸರಿನಲ್ಲಿ ಇಲ್ಲವೇ ಧರ್ಮದ ಮುದ್ರೆಯಲ್ಲಿ ಆತ್ಮ ಹತ್ಯೆ ಮಾಡಿಕೊಳ್ಳುವಂತೆ ಜನರ ಒಂದು ಗುಂಪನ್ನು ನಡಿಸಿದನು.



© 2009 Truth for Today